ಭಾರತೀಯ ಜನತಾ ಪಾರ್ಟಿ–ಕರ್ನಾಟಕ
Bharatiya Janata Party - Karnataka

"ಜಗನ್ನಾಥ ಭವನ" ನಂ. 48, ದೇವಸ್ಥಾನದ ರಸ್ತೆ, 11ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಂಗಳೂರು – 560 003.
ದೂ : 080–22041976, 23569999, ಫ್ಯಾಕ್ಸ್ : 080–23460398

ರಾಕಾ/ಸಾ/೨೨೪/2019

**ದಿನಾಂಕ: 10.04.2019**

**ಗೆ,**
**ಮುಖ್ಯ ಚುನಾವಣಾಧಿಕಾರಿಗಳು,**
ಕೇಂದ್ರ ಚುನಾವಣಾ ಆಯೋಗ
"ನಿರ್ವಾಚನ ನಿಲಯ"
ಶೇಷಾದ್ರಿ ರಸ್ತೆ, ಬೆಂಗಳೂರು.

Received
R. Chetha 10/4/19
10 APR 2019
ಬೆಂಗಳೂರು

ಮಾನ್ಯರೇ,

**ವಿಷಯ: ಮೈಸೂರು ಪೊಲೀಸ್ ಕಮೀಷನರ್ ಶ್ರೀ ಬಾಲಕೃಷ್ಣ ಅವರ ವರ್ಗಾವಣೆಗೆ ಆಗ್ರಹ**

– – –

ದಿನಾಂಕ 09.04.2019ರಂದು ಮೈಸೂರಿನಲ್ಲಿ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರ ಸಾರ್ವಜನಿಕ ಸಭೆಯಿತ್ತು. ಸಾವಿರಾರು ಸಂಖ್ಯೆಯಲ್ಲಿಸಾರ್ವಜನಿಕರು ಸೇರಿದ್ದರು.

ಈ ಕಾರ್ಯಕ್ರಮ ನಡೆಯದಂತೆ ಮಾಡಲು ಕಾಂಗ್ರೆಸ್ ಹಾಗೂ ಜೆ.ಡಿ.ಎಸ್. ಕಾರ್ಯಕರ್ತರು ಶ್ರೀ ನರೇಂದ್ರ ಮೋದಿಯವರ ಕಾರ್ಯಕ್ರಮಕ್ಕೆ ತೊಂದರೆ ಕೊಡುವ ಉದ್ದೇಶದಿಂದ 3 ದಿನದ ಮೊದಲೇ ಕೆಲವು ಕಾರ್ಯಕರ್ತರ ಮುಖಾಂತರ ಹಲವು ರೀತಿಯಲ್ಲಿ ತೊಂದರೆ ಕೊಟ್ಟಿದ್ದಾರೆ. ಅದರ ವಿವರ ಹೀಗಿದೆ.

1. ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಶ್ರೀಮತಿ ಮಂಜುಳಾ ಮಾನಸವರ ನೇತೃತ್ವದಲ್ಲಿ ಶ್ರೀ ನರೇಂದ್ರ ಮೋದಿಯವರು ಬರುವ ದಾರಿಯಲ್ಲಿ ಪ್ರತಿಭಟನೆ ನಡೆಸಲು ತಯಾರಿ ನಡೆಸಿರವುದು. ಇದರ ಸುಳಿವು ಅರಿತ ಬಿಜೆಪಿ ಕಾರ್ಯಕರ್ತರು ಪೊಲೀಸ್ ಕಮೀಷನರ್ ಆದ ಶ್ರೀ ಬಾಲಕೃಷ್ಣ ಅವರ ಗಮನಕ್ಕೆ ತಂದಿದ್ದರು. ಈ ವಿಷಯ ಕಾರ್ಯಕರ್ತರು ಮತ್ತು ಪೊಲೀಸ್ ಕಮೀಷನರ್ ಹೊರತಾಗಿ ಯಾರಿಗೂ ತಿಳಿದಿರಲಿಲ್ಲ. ಆದರೆ ಅವರುಗಳು ತಂಗಿದ್ದ ಮನೆಯ ಮೇಲೆ ದಾಳಿ ಮಾಡಲು ಪೊಲೀಸರು ಹೋದಾಗ ಶ್ರೀಮತಿ ಮಂಜುಳಾ ಮಾನಸ ಹಾಗೂ ಅವರ ಅನುಯಾಯಿಗಳು ಪರಾರಿಯಾಗಿದ್ದು ಅನುಮಾನಕ್ಕೆ ಆಸ್ಪದವಾಗಿರುತ್ತದೆ.

2. ಶ್ರೀ ಅಶೋಕ ಎನ್ನುವ ಗೂಂಡಾ ತನ್ನ ಸುಮಾರು 130 ಸಹಚರರೊಂದಿಗೆ ಲಕ್ಷ್ಮೀ ಚಿತ್ರಮಂದಿರದ ಮುಂಭಾಗದಲ್ಲಿ ಜಮಾಯಿಸಿದ್ದರು. ಅವರು ಶ್ರೀ ನರೇಂದ್ರ ಮೋದಿಯವರ ಕಾರ್ಯಕ್ರಮ ಅಡ್ಡಿಪಡಿಸುವುದು, ಗಲಾಟೆ ಮಾಡುವುದು ಅವರ ಯೋಜನೆಯಾಗಿತ್ತು. ಇವರನ್ನೆಲ್ಲಾ ಅರೆಸ್ಟ್ ಮಾಡಲು ಶ್ರೀಯುತ ಬಾಲಕೃಷ್ಣ ಅವರಿಗೆ ದೂರು ಕೊಟ್ಟರೂ ಪ್ರಯೋಜನವಾಗಿಲಿಲ್ಲ. ನೆಪಮಾತ್ರಕ್ಕೆ ಅವರನ್ನು ಬಂಧಿಸಿ ಯಾವುದೇ ಕೇಸ್ ಹಾಕದೇ ಕಳುಹಿಸಿದ್ದಾರೆ.



Scanned by CamScanner

3. ಮಾಜಿ ಶಾಸಕರನಾದ ಶ್ರೀ ಸೋಮಶೇಖರ್ ಅವರು ತಮ್ಮ ವಶೀಲಿಯಿಂದ ರೌಡಿ ಶೀಟರ್ ಶ್ರೀ ಅಶೋಕನನ್ನು ಬಂಧಿಸದೆ ಅವನ ಮೇಲೆ ಯಾವ ಕೇಸ್ ಹಾಕದೆ ಬಿಟ್ಟು ಕಳುಹಿಸುವಲ್ಲಿ ಯಶಸ್ವಿಯಾಗಿದ್ದಾರೆ.

4. ಕಾರ್ಯಕ್ರಮದ ಸ್ಥಳದಲ್ಲಿ ವಿವಿದ ಕೆಲಸದ ಜವಾಬ್ದಾರಿಯಲ್ಲಿ ಕೆಲಸ ಮಾಡುತ್ತಿದ್ದ ಬಿಜೆಪಿ ಕಾರ್ಯಕರ್ತರಿಗೆ ಪಾಸ್ ಕೊಡುವ ಉದ್ದೇಶದಿಂದ ಬೆಳಿಗ್ಗೆ 7.00 ಘಂಟೆಗೆ ಎಲ್ಲಾ ಕಾರ್ಯಕರ್ತರ ಫೋಟೋ, ಅವರ ವಿವರ ಕೊಟ್ಟರೂ ಮಧ್ಯಾಹ್ನ ಹನ್ನೆರಡು ಘಂಟೆಯಾದರೂ ಇಲ್ಲಸಲ್ಲದ ಸಬೂಬು ಹೇಳುತ್ತಾ, ಕೊನೆಗೆ ಆಫೀಸ್ ಬಾಗಿಲು ಹಾಕಲು ಆರಂಭಿಸಿದಾಗ ತಮಗೆ ಪಾಸ್ ಕೊಡಬೇಕು ಎಂದು ಬಿಜೆಪಿ ಕಾರ್ಯಕರ್ತರು ಆಗ್ರಹಿಸಿದಾದ ಆ ಸಮಯಕ್ಕೆ ಸರಿಯಾಗಿ ಎಸ್‌ಪಿಜಿ ಯವರು ಬಂದು ಯಾಕೆ ಇವರಿಗೆ ಪಾಸ್ ಕೊಡಲಿಲ್ಲ ಎಂದು ವಿಚಾರಿಸಿದಾಗ ಕೂಡಲೇ ಬಾಗಿಲು ತೆಗೆದು ಪಾಸ್ ವಿತರಿಸಿದ್ದಾರೆ.

5. ಮೇಲಿನ ಎಲ್ಲಾ ಕಾನೂನು ಬಾಹಿರ ಮತ್ತು ಚುನಾವಣಾ ನೀತಿ ಸಂಹಿತೆಯನ್ನು ಉಲ್ಲಂಘನೆಗೆ ಕುರಿತ ಒಂದು ಗುಂಪುಗಳ ವಿರುದ್ದ ದೂರು ಕೊಟ್ಟರೂ ಪೊಲೀಸ್ ಕಮೀಷನ್‌ರ್ ಶ್ರೀ ಬಾಲಕೃಷ್ಣ ಅವರ ಗಮನಕ್ಕೆ ಈ ಸಂಗತಿ ಬಂದರೂ ಸಹ ಯಾರ ಮೇಲೂ ಕ್ರಮ ಕೈಗೊಳ್ಳದೆ ಮತ್ತು ಅವರ ಪರವಾಗಿಯೇ ಕೆಲಸ ಮಾಡಿದ್ದಾರೆ. ಕಾರಣ ನ್ಯಾಯ ಸಮ್ಮತ ಹಾಗೂ ಶಾಂತಿಯುತ ಮತದಾನವಾಗಲು ಸದ್ಯದ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲದ ಕಾರಣ ಕೂಡಲೇ ಮೈಸೂರು ಪೊಲೀಸ್ ಕಮೀಷನ್ ಶ್ರೀ ಬಾಲಕೃಷ್ಣ ಅವರನ್ನು ಬೇರೆಡೆ ವರ್ಗಾಯಿಸಬೇಕೆಂದು ತಮ್ಮಲ್ಲಿ ಆಗ್ರಹಿಸುತ್ತೇವೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿಗಳು,

(ಸಿ.ಟಿ.ರವಿ)
*ಶಾಸಕರು ಹಾಗೂ*
*ರಾಜ್ಯ ಪ್ರಧಾನ ಕಾರ್ಯದರ್ಶಿ*

(ದತ್ತಗುರು ಹೆಗಡೆ)
*ರಾಜ್ಯ ಸಂಚಾಲಕರು*
*ಚುನಾವಣಾ ಆಯೋಗ ಸಮಿತಿ*

(ವಿವೇಕ್ ರೆಡ್ಡಿ)
*ವಕೀಲರು*
*ಚುನಾವಣಾ ಆಯೋಗ ಸಮಿತಿ*

(ವಿನೋದಕುಮಾರ್)
*ಕಾನೂನು ಪ್ರಮುಖರು*
*ಚುನಾವಣಾ ಆಯೋಗ ಸಮಿತಿ*

(ಆನಂದ್)
*ಸಂಚಾಲಕರು*
*ಮಾಧ್ಯಮ ವಿಭಾಗ*



Scanned by CamScanner